SC:111/2021
PW:34 CW:54

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್)

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 111/2021

| | |
|---|---|
| PW | 34 |
| CW | 54 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 14.03.2025.

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀನಿವಾಸಲು |
| ತಂದೆಯ ಹೆಸರು | : | ವೆಂಕಟರಾಮಪ್ಪ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಇಂಜಿನಿಯರ್ |
| ವಾಸಸ್ಥಳ | : | ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಮೃತ ವಿಶ್ವನಾಥ ಅವರ ಪರಿಚಯ ಇರುವುದಿಲ್ಲ. ಅದೇ ರೀತಿ ಈ ಕೇಸಿನ ಯಾವುದೇ ಸಾಕ್ಷಿದಾರರ ಪರಿಚಯ ಇಲ್ಲ. ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ 1 ಮತ್ತು 3 ನೇ ಆರೋಪಿತರ ಪರಿಚಯ ಇಲ್ಲ. ಅದೇ ರೀತಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 2 ಮತ್ತು 4 ನೇ ಆರೋಪಿತರ ಪರಿಚಯ ಇಲ್ಲ.

2. ನಮ್ಮ ಮನೆ ಸಿ.ಕೆ. ಪಾಳ್ಯದಲ್ಲಿ ಇರುತ್ತದೆ. ನಮ್ಮ ಮನೆಯಲ್ಲಿ ನನ್ನ ಜೊತೆ ನನ್ನ ಹೆಂಡತಿ ಹಾಗೂ ಇಬ್ಬರು ಮಕ್ಕಳು ವಾಸ ಇರುತ್ತಾರೆ. ನನ್ನ ಬಳಿ ಹೊಂಡಾ ಆಕ್ಟಿವಾ ವಾಹನ ಇದ್ದು, ಅದರ ನಂಬರ್ ಕೆಎ 51/ಇವೈ 1133 ಆಗಿರುತ್ತದೆ. ಸುಮಾರು ಮೂರುವರೆ ವರ್ಷಗಳ ಹಿಂದೆ ನನ್ನ ಮೋಟಾರ್ ಬೈಕ್ ಕಳವು ಆಗಿದ್ದು, ಆ ದಿನ ನಮ್ಮ ಚಿಕ್ಕ ಹುಡುಗ ಮಧ್ಯರಾತ್ರಿ 3.00 ಗಂಟೆ ಸಮಯದಲ್ಲಿ ಅಳುತ್ತಿದ್ದು, ಅವನನ್ನು ಕರೆದುಕೊಂಡು ಮನೆಯಿಂದ ಹೊರೆಗೆ ಬಂದು ನೋಡಿದಾಗ ನನ್ನ ದ್ವಿಚಕ್ರ ವಾಹನ ಕಳ್ಳತನ ಆಗಿದ್ದು, ಇದರ ಜೊತೆ ಬೀರುವಿನಲ್ಲಿ ಇಟ್ಟಿದ್ದ ಬ್ರೇಸ್ ಲೇಟ್, ಮಗುವಿನ ಚೈನ್, ನನ್ನ ಹೆಂಡತಿಯ ಚೈನ್ ಹಾಗೂ ರೂ.8000/- ನಗದು ಕಳವು ಆಗಿತ್ತು.

3. ಅದಕ್ಕಾಗಿ ನಾನು ಬನ್ನೇರುಘಟ್ಟ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದು ನಂತರ ವಕೀಲರ ಮೂಲಕ ಅರ್ಜಿ ಸಲ್ಲಿಸಿ ವಾಹನ ಬಿಡಿಸಿಕೊಳ್ಳಲು ನ್ಯಾಯಾಲಯದಲ್ಲಿ ಕೋರಿದ್ದು ಇದುವರೆಗೂ ವಾಹನವನ್ನು ಬಿಡಿಸಿಕೊಂಡಿಲ್ಲ. ನಾನು ದೂರು ಕೊಟ್ಟ ನಂತರ ಗೌರಿಬಿದನೂರು ಪೊಲೀಸರು ನನಗೆ ಫೋನ್ ಮಾಡಿ ನನ್ನ ದ್ವಿಚಕ್ರ ವಾಹನವನ್ನು ಜಪ್ತಿಪಡಿಸಿರುವುದಾಗಿ ತಿಳಿಸಿದ್ದರು. ಸದರಿ ವಾಹನವನ್ನು ನಾನು ನೋಡಿದಲ್ಲಿ ಗುರುತಿಸುತ್ತೇನೆ. ಸದರಿ ವಾಹನವನ್ನು ಯಾರು ಕಳವು ಮಾಡಿದ್ದರು, ಅದನ್ನು ಏತಕ್ಕಾಗಿ ಉಪಯೋಗಿಸಿದ್ದರು ಎಂದು ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

4. ನಾನು ಈಗ ಓದಿ ಹೇಳಿದಂತೆ " ಗೌಬಿದನೂರು ನಗರ ಪೊಲೀಸ್ ಠಾಣೆ

.............................................................. ................................................

..........................................................................................................

......ವಾಹನವು ನನ್ನದೇ ಆಗಿರುತ್ತದೆ" ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಶ್ರೀ ಎ.ಸಿ.ಡಿ. ಹಾಗೂ ಶ್ರೀ ಕೆ.ಎಸ್.ಎನ್ ವಕೀಲರ ಪರವಾಗಿ ಶ್ರೀ ಬಿ.ಎನ್.ಎಂ. ಹಾಗೂ ಶ್ರೀ ಜಿ.ಹೆಚ್.ಎಂ. ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 14.03.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.